# ಯಾರು ಸಮರು ನನಗೆ...

'ಕೇಂದ್ರ ಸಂಗೀತ ನಾಟಕ ಅಕಾಡೆಮಿ' ಪ್ರಶಸ್ತಿಗೆ ಪಾತ್ರವಾಗಿರುವ ತಿಪಟೂರು ತಾಲ್ಲೂಕಿನ ಅರಳಗುಪ್ಪೆ ಗ್ರಾಮದ ನಂಜಪ್ಪ ಭಾಗವತರು ಹಲವು ಕಲೆಗಳಲ್ಲಿ ನುರಿತ ಕಲಾವಿದರು. ಮೂಡಲಪಾಯ ಯಕ್ಷಗಾನದ ಭಾಗವತಿಕೆಯಷ್ಟೇ ಸೊಗಸಾಗಿ ಕೃಷಿಯನ್ನೂ, ಬಡಿಗತನವನ್ನೂ ಮಾಡಬಲ್ಲರು. 'ನನ್ನಂಗೆ ಯಾರಾದರೂ ಕೃಷಿ ಮಾಡಲಿ ನೋಡೋಣ' ಎಂದು 83ರ ಅಜ್ಜ ಮೀಸೆಯ ಮೇಲೆ ಕೈಯಾಡಿಸಿದರೆ ಯುವಜನರೂ ನಾಚಬೇಕು.

■ ಡಿ.ಎಂ. ಕುರ್ಕೆ ಪ್ರಶಾಂತ



'ನನ್ನ ಕೆಲಸ ಮಾಡಲು ಯಾರಿಂದಲೂ ಸಾಧ್ಯವೇ ಇಲ್ಲ. ಬೇಕಿದ್ದರೆ ಚಾಲೆಂಜ್!'

ಆರು ಅಡಿ ಮೀರಿದ ಅಜಾನುಬಾಹು ಹಾಗೂ ದೃಢಕಾಯರಾದ 83ರ ಪ್ರಾಯದ ಕಲ್ಮನೆ ಎ.ಎಸ್. ನಂಜಪ್ಪ ಸವಾಲು ಹಾಕಿದರು. ಹುರಿಗಟ್ಟಿದ ದಪ್ಪ ಮೀಸೆ ಹಾಗೂ ಅವರ ಆಕಾರ, ನಿಜಕ್ಕೂ ಒಬ್ಬ ಶಕ್ತಿಶಾಲಿ ಕುಸ್ತಿಪಟುವನ್ನೇ ಹೋಲುತ್ತದೆ.

ಕಲ್ಮನೆ ನಂಜಪ್ಪ ತಿಪಟೂರು ತಾಲ್ಲೂಕಿನ ಅರಳಗುಪ್ಪೆ ಗ್ರಾಮದವರು. ಮೂಡಲಪಾಯ ಯಕ್ಷಗಾನದ ಹಿರಿಯ ಭಾಗವತರು. 2018ನೇ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು. ತುಮಕೂರು ಜಿಲ್ಲೆಯ ಹಳ್ಳಿಗಾಡಿನಲ್ಲಿ ಮೂಡಲಪಾಯ ಯಕ್ಷಗಾನಕ್ಕೆ ಭದ್ರ ನೆಲೆ ಹಾಕಿದವರು. ರಾಜ್ಯದ ವಿವಿಧ ಭಾಗಗಳಲ್ಲಿ ಸಾವಿರಾರು ಕಾರ್ಯಕ್ರಮ ನೀಡಿದವರು.

ನಂಜಪ್ಪ ಅವರ 'ಸವಾಲಿ'ನಲ್ಲಿ ಅವರ ಬದುಕಿನ ಹಿನ್ನೋಟ, ಆಸಕ್ತಿಯ ಹಲವು ಮುಖಗಳು ತೆರೆದುಕೊಳ್ಳುತ್ತವೆ. ಕಲಾಕ್ಷೇತ್ರಕ್ಕೆ ನಂಜಪ್ಪ ಭಾಗವತರಾಗಿ ಪರಿಚಿತರು. ಆದರೆ ಅವರೊಬ್ಬ ಉತ್ತಮ ಕೃಷಿಕರೂ ಹೌದು. ಅಷ್ಟು ಮಾತ್ರವಲ್ಲ – ಬಡಿಗ, ನುರಿತ ಕೌಶಲವುಳ್ಳ ಚಿತ್ರ ರಚನಕಾರರೂ! ಕಲೆ ಅವರಿಗೆ ರಕ್ತಗತ. ಅವರ ಅಜ್ಜ ಮಲ್ಲಿಕಾರ್ಜುನಪ್ಪ, ಮಾವ ಸಿದ್ದಲಿಂಗಪ್ಪ, ತಂದೆ ಶಿವನಂಜಪ್ಪ ಸಹ ಭಾಗವತರು. 6ನೇ ವಯಸ್ಸಿನಲ್ಲಿ ಸ್ತ್ರೀ ಪಾತ್ರದ ಮೂಲಕ ನಂಜಪ್ಪ ರಂಗಪ್ರವೇಶಿಸಿದರು. ಬಾಲಗೋಪಾಲ, ಶಾರದೆ ಅವರ ಆರಂಭದ ಪಾತ್ರಗಳು. ಬಾಲ್ಯದಿಂದಲೇ 'ಚನ್ನಬಸವ ಪುರಾಣ' ಕೇಳುತ್ತ ಬೆಳೆದವರು.

'ರತಿ ಕಲ್ಯಾಣ', 'ಕರ್ಣಪರ್ವ', 'ಶಿವ ಜಲಂಧರ', 'ತ್ರಿಪುರ ಸಂಹಾರ', 'ಶನಿ ಮಹಾತ್ಮೆ', 'ದೇವಿ ಮಹಾತ್ಮೆ', 'ಮಾರ್ಕಂಡೇಯ ಚರಿತ್ರೆ' ಹೀಗೆ ಹಲವು ಕಥೆಗಳನ್ನು ತಂಡದಿಂದ ಪ್ರದರ್ಶಿಸಿದ್ದಾರೆ.

### ಮೊದಲು ಕಲೆ ಉಳಿಯಬೇಕು...

'ಪ್ರಶಸ್ತಿಗಳನ್ನು ಬಯಸಿ ಭಾಗವತಿಕೆ